327

## ಅಂಚೇ ಇಲಾಖಾ.

ನಂ. 77—47. ತಾರೀಖು 13ನೇ ಮೇ 1884.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೆ ಆಫೀಸ್‌ಗಳು ಸ್ಥಾಪಿಸಲ್ಪಟ್ಟಿರುತ್ತವೆ:—

| ತಾಲ್ಲೂಕು. | ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು. |
|---|---|
| ಆನೆಕಲ್ | ದೊಮ್ಮಸಂದ್ರ. |
| ನಂಜನಗೂಡು | ಹುಲ್ಲಹಳ್ಳಿ. |

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

## ಕೋಲಾರ ಡಿಸ್ಟ್ರಿಕ್ಟು.

ತಾರೀಖು 8ನೇ ಮೇ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿಕ್ಕಬಳ್ಳಾಪುರದ ಟರ್ನಲ್ಲಿರುವ ಹಳೇ ತಾಲ್ಲೂಕು ಕಛೇರಿ ಕಟ್ಟಡ ನಿವೇಶನ ಸಹಿತ ಸ್ಯ॥ 1884ನೇ ಇಸವಿ ಜೂನ್ ತಾರೀಖು 2ನೇ ದಿವಿ 11 ಘಂಟೆಗೆ ಆ ತಾಲ್ಲೂಕು ಅಮಲ್ದಾರ್‌ವರ ರೂಬರೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಯಿಚ್ಛೈನುಳ್ಳವರು ಆ ಕಾಲಕ್ಕೆ ಸರಿಯಾಗಿ ಹಾಜರಾಗಿ ಧಾರಾಳವಾಗಿ ಸವಾಲ್ ಮಾಡಬಹುದು, ಹರಾಜು ಕೈದಾದ ಮೇಲೆ ಬರುವ ಸವಾಲ್ ಮಂಜೂರ್ ಮಾಡಲ್ಪಡುವದಿಲ್ಲ.

2. ಈ ಹರಾಜು ದೀರ್ವಾ ಸಾಹೆಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

3. ಹರಾಜು ಕೈದಾದ ವಡನೆ ಚಡ ಸವಾಲ್‌ದಾರನು ಅವನ ಸವಾಲ್ ಮೊಬಲಗು ಪೈಕೀ 4ರಲ್ಲಿ ವಂದು ಹಿಸ್ಸೆ ಪೇವಣಿ ಯಿಡಬೇಕು, ಯಿಡುವದಕ್ಕೆ ತಪ್ಪಿದರೆ ದುಸರಾ ಹರಾಜು ಹಾಕಿಸಲ್ಪಡುತ್ತೆ, ಕಮ್ಮಿ ಬಿದ್ದ ಮೊಬಲಗು ಚಡ ಸವಾಲ್‌ದಾರನ ಜಿಂದಗಿ ಯಿಂದ ರೆವಿನ್ಯೂ ಕಂದಾಯದ ಬಾಕೀಯ್ತಂತೆ ವಸೂಲ್ಮಾಡಲ್ಪಡುವದು, ಆ ಹರಾಜಿನಲ್ಲಿ ಜಾಸ್ತೀ ಹುಟ್ಟಿದರೆ ಚಡ ಸವಾಲ್‌ದಾರನಿಗೆ ಜಾಸ್ತೀ ಮೊಬಲಗ್ಯೆ ಹಕ್ಕು ಯಿಲ್ಲಾ, ಹರಾಜು ದೀರ್ವಾ ಸಾಹೆಬರವರಿಂದ ಮಂಜೂರ್ ಮಾಡಲ್ಪಟ್ಟ ಸಂಗತಿಯನ್ನ ಬರವಣಿಗೆ ಮೂಲಕವಾಗಿ ಚಡ ಸವಾಲ್‌ದಾರನಿಗೆ ತಿಳಿಸಿದ 3 ದಿವಸಗಳ ವಳಗಾಗಿ ಅವನು ಬಾಕೀ ಮೊಬಲಗನ್ನು ಮತ್ತು ಚಡ ಸವಾಲ್ ಮೊಬಲಗ್ಯೆ ರೂಪಾಯಿ 1ಕ್ಕೆ 1ಆಣೆ ಮೇರಿಗೆ ಲೋಕಲ್ ಸೆಸ್ ಸಹ ಪಾವತೀ ಮಾಡಿ ಕಟ್ಟಡ ಸ್ವಾಧೀನಕ್ಕೆ ಪಡಿಯಬೇಕು, ಬಾಕೀ ಹಣ ಲೊಕಲ್ ಸೆಸ್ ಸಹಾ ಕೊಡುವದಕ್ಕೆ ತಪ್ಪಿದರೆ ಪೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಪುನಃ ಹರಾಜು ಹಾಕಿಸಿ ಲುಕಸರ್ನ ಮೊಬಲಗನ್ನು ತಪ್ಪಿದ ಚಡ ಸವಾಲ್‌ದಾರನಿಂದ ರೆವಿನ್ಯು ಕಂದಾಯದಂತೆ ವಸೂಲ್ಮಾಡಲಾಧೀತು.

ಜೆ. ರಘುನಾಥರಾವ್,
ಫಾರ್ ಡೆ॥ ಕಮ್ಮಿಷನರ್.

## ತುಮಕೂರು ಡಿಸ್ಟ್ರಿಕ್ಟು.

ತಾರೀಖು 13ನೇ ಮೇ 1884.

ತುಮಕೂರು ಡಿಸ್ಟ್ರಿಕ್ಟು ಮಾಜಸ್ಟ್ರೇಟರವರು, ಇದರಡೀಕಂಡ ಮಾಜಿಸ್ಟ್ರೇಟ್‌ಗಳಿಗೆ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 23ನೇ (ಬಿ) ಸೆಕ್ಷನ್ ಅನುಸರಿಸಿ ಈ ಕೆಳಗೆ ಕಂಡ ಜಾಸ್ತೀ ಅಧಿಕಾರಗಳು ಕೊಟ್ಟಿರುತ್ತಾರೆ:—

ಚಿತ್ರದುರ್ಗದ ಮುನಿಸಿಫ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಬಿ. ಶ್ರೀನಿವಾಸರಾವ್.

ಕೊರಟಿಗೆರೆ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮತ್ತು 3ನೇ ಕ್ಲಾಸ್ ಮಾಜಿಸ್ಟ್ರೇಟ್ ಆರ್. ಶಾಮರಾವ್.

1. ಲಾಷ್ ವಿಚಾರಣೆಯ ಬಗ್ಯೆ ಅಧಿಕಾರ (135ನೇ ಸೆಕ್ಷನ್.)
2. ವಿಚಾರಣೆ ಮಾಡಲಿಕ್ಕೆ ತಮಗೆ ಅಧಿಕಾರವಿರುವ ಮೊಕದ್ದಮೆಗಳಲ್ಲಿ ತಕಸೀರ್‌ಗಳ ಬಾಬತು ಫಿರ್ಯಾದ್‌ಗಳನ್ನು ದಾಖಲ್ ಮಾಡಿಕೊಳ್ಳಲಿಕ್ಕೆ ಅಧಿಕಾರ.
3. ನಿರೋಧ ವಗೈರೇಯನ್ನು ಅಡ್ಡಿ ಪಡಿಸಲಿಕ್ಕೆ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ (518ನೇ ಸೆಕ್ಷನ್.)
4. ಠೇಸಿಕೆಯು ಬಾರ್ ಬಾರ್ ನಡೆಯತಕ್ಕದ್ದನ್ನು ನಿಷೇಧಿಸಿ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ (519.)

ಪಿ. ಎಸ್. ಕೃಷ್ಣಮೂರ್ತಿ,
ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

---

## ಮೈಸೂರು ಡಿಸ್ಟ್ರಿಕ್ಟ್.

ತಾರೀಖು 21ನೇ ಏಪ್ರಿಲ್ 1884.

ಇದರಿಂದ ತಿಳಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹಿಡುವಳ್ಳೀಯಲ್ಲಿಲ್ಲದ ಕಂದಾಯ ತರಾಯಿಸಲ್ಪಟ್ಟ ಮತ್ತು ಕಂದಾಯ ತರಾಯಿಸಲ್ಪಡದ ತಮಾಂ ಜಮೀನುಗಳು, ಗ್ರಾಮ ಜೀಲೀಗಳು, ಅಮರಾಯಿ ವ ಅಮರಾಯಿ ಜೀಲೀಗಳು, ಇನ್ನುಗಳು ಆಡಗಿರುವ ಡಿಸ್ಟ್ರಿಕ್ಟ ಜಂಗ್ಲೀಗಳ ಪಸಾರೀ ಹುಟ್ಟುವಳ್ಳೀಯನ್ನು, 1885ನೇ ಮಾರ್ಚಿ 31ರ ವರಿಗೆ ಜವಾಬಿಸುವ ಹಕ್ಕು ದಾರೀಯು, ತಾಲ್ಲೂಕುವಾರಾಗಿ ಬಹಿರಂಗವಾದ ಹರಾಜು ಮೂಲಕ ಡೆಪ್ಯುಟಿ ಕಮ್ಮಿಷನರ ಆಫೀಸಿನಲ್ಲಿ ಮೈಸೂರು ಡಿಸ್ಟ್ರಿಕ್ಟ ಫಾರೆಸ್ಟ್ ಪ್ರೊಬೇಷನರಿಂದ, 1884ನೇ ಜೂನ್ 5ನೇ ಮಕ್ಕುಂ ಮದ್ಯಾನ್ಹ ವಿಕ್ರಯಿಸಲ್ಪಡುವದು.

| ತಾಲ್ಲೂಕು. | ಹುಟ್ಟುವಳ್ಳಿಯ ತಪಸೀಲ್. |
|---|---|
| ಮೈಸೂರು<br>ಹೆಗ್ಗಡದೇವನಕೋಟಿ<br>ಹುಣಸೂರು<br>ಗುಂಡ್ಲುಪೇಟೆ<br>ನಂಜನಗೂಡು<br>ಜಾವರಾಜನಗರ<br>ತಿರುಮಕೋಡ್ಲು ನರಸೀಪುರ<br>ಮಂಡ್ಯ<br>ಶ್ರೀರಂಗಪಟ್ಟಣ<br>ಯಡತೋರೆ | 1 ಅಳಲೀಕಾಯಿ, 2 ತಾರೇಕಾಯಿ, 3 ಸೀಗೇಕಾಯಿ, 4 ಅಂಟುವಾಳದ ಕಾಯಿ, 5 ದಿಂಡಗದ ಬಂಕೆ, 6 ಕಾಡು ಅರಿಸಿನ, 7 ಜೇನುಮೇಣ, ವ ಜೇನುತುಪ್ಪ, 8 ಅರಗು, 9 ಕಪಿಲೇರಂಗು, 10 ಪಚ್ಚೆಲಕ್ಕಿ, 11 ಪತಂಗ, 12 ಮಡ್ಡಿ, 13 ಚಕ್ಕೆದಬೀಜ, 14ಚಿಗಚಿ ಬೀಜ, 15 ಹೊಂಗೇಬೀಜ, 16 ಗೇರುಬೀಜ, 17 ಹಾಲು ಮಡ್ಡಿ, ಅವರಿಕೇ ಬಂಕೆ, 19 ಸೂರಗದ ಕೊಂಬು, 20 ಗುಗ್ಗಳ ವಗೈರೇ. |

ಇಜಾರೇದಾರರಿಗೆ, ಹಿಡುವಳ್ಳೀ ಜಮೀರ್ಗಳಲ್ಲೂ ಸ್ವಂತ ಅಮರಾಯಿಗಳಲ್ಲೂ ಯಿರುವ ಮರಗಳ ಹುಟ್ಟುವಳ್ಳೀ ವಿಷಯದಲ್ಲಿ ಯಾವ ಹಕ್ಕು ದಾರಿಯೂ ಉಂಟಾಗತಕ್ಕದ್ದಲ್ಲವು.

ಚಿಡ ದರಖಾಸ್ತುದಾರನು, ದರಖಾಸ್ತು ಮೊಬಲಗ್ ಪೈಕೀ ಸೇಕಡಾ 25ರ ಪ್ರಕಾರ ಕೂಡ್ಲೇ ತೇವಣೀ ಯಿಟ್ಟು ಬಾಕೀ ಮೊಬಲಗನ್ನು ಡಿಸ್ಟ್ರಿಕ್ಟ ಯಾ ತಾಲ್ಲೂಕು ಖಜಾನೇಯಲ್ಲಿ ಸಮನಾದ ಮೂರು ಖಿಸ್ತುಗಳ ಪ್ರಕಾರ ಸ್ಯ 1884ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಯೂ, 1884ನೇ ನವೆಂಬರ್ 1ನೇ ಮಕ್ಕುಂನಲ್ಲಿಯೂ, 1884ನೇ ಡಿಸೆಂಬರ್ 1ನೇ ತಾರೀಖಿನಲ್ಲಿಯೂ, ಪಾವತಿ ಮಾಡತಕ್ಕದ್ದು.

ಯಾವ ಖಿಸ್ತಾಗಲಿ ಬಾಕೀಯಾದಾಗ ಪಾವತೀ ಮಾಡಲಿಕ್ಕೆ ತಪ್ಪಿದರೆ, 1885ನೇ ಇಸವೀ ಮಾರ್ಚಿ 31ರ ವರಿಗೆ ಸಾಲಿನ ಉಳಿದ ಭಾಗಕ್ಕೆ ಜಂಗ್ಲೀ ಹುಟ್ಟುವಳ್ಳೀಯನ್ನು ಜವಾಬಿಸುವ ಹಕ್ಕು ಫಾರೆಸ್ಟ್ ಇಲಾಖೇಯವರಿಂದ ಪುನಃ ಹರಾಜು ಮಾಡಲ್ಪಡುವದು, ಅಥವಾ ಅಮಾನೀಯಲ್ಲಿ ಸದರೀ ಇಲಾಖೇಯವರಿಂದ ರೂಢಿಸಲ್ಪಡತಕ್ಕದ್ದು, ಹಣ ಕೊಡಲಿಕ್ಕೆ ತಪ್ಪಿದವನು ಅದರ ದೆಸೆಯಿಂದ ಉಂಟಾಗುವ ಯಾವ ನುಕ್ಸಾನಿಗಾಗಲಿ ಜವಾಬ್ದಾರನಾಗಿ ಮಾಡಲ್ಪಡತಕ್ಕದ್ದು.

ಫಾರೆಸ್ಟ್ ಪ್ರೊಬೇಷನರವರು, ದರಖಾಸ್ತು ಮಾಡಲಿಕ್ಕೆ ಖಾಯಿಷ್ ಮಾಡತಕ್ಕವರಿಗೆ ಬೇಕಾದ ಯಾವ ಸಂಗತಿಯನ್ನಾಗಲಿ, ಹರಾಜು ತಾರೀಖಿಗೆ ಮುಂದೆ ಅವರ ಆಫೀಸಿನಲ್ಲಿ ಖುದ್ ಖಾಯಿಷ್ ಮಾಡಿಕೊಂಡಿರಿ ತಿಳಿಸತಕ್ಕದ್ದು.

ಅಬ್ದುಲ್‌ಖಾದರ್ ಕೆ. ಬಿ,
ಡೆಪ್ಯುಟಿ ಕಮ್ಮಿಷನರ್.